Reg. No. BG 155 7-1-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಸ್ವಾಚಾರನಿರತ ಎಂ ಎಸ್. ಕೃಷ್ಣರಾವ್ [2 ಪೈಸೆ

ನಾಕಲೆಟ್ ಗಿರಿಜನರ ಹಾವಳಿ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀನುನ್ನ ಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ಸೇತ್ಸದ್ಧಾನಿ ಡಾ॥ ಎಂ.ಸಿ. ಮೋದಿಯವರು ಡಾ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ, ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆನೆಂದು ಆಶಿಸಿ, ಕೃತಜ್ಞತಾಪೂರ್ವಕ ವಂದಿಸುತ್ತೇವೆ

ಸಂಪಾದಕ ' ಸತ್ಯವಾದಿ '
ಚಾಮರಾಜಪುರಂ, ಮೈಸೂರು 4.

ಸ್ತುತ್ಯ ಕಾರ್ಯ

ಬೆಂಗಳೂರು— ರೆವೆನ್ಯೂ ಇಲಾಖೆಯು ನವೆಂಬರ್ 1 ರಿಂದ ಪ್ರಾರಂಭಿಸಿದ ದಸ್ತಾ ಚಳವಳಿದಲ್ಲಿ, 3 ತಿಂಗಳಿಗೆ ಮೇಲ್ಪಟ್ಟು ವ್ಯವಸ್ಥೆಯಾಗದಿದ್ದ 4426 ವ್ಯವಹಾರಗಳಲ್ಲಿ 2992 ವಿಲೇವಾರಿ ಮಾಡಲಾಯಿತು.

ಬುರುಕೆ ಧರಿಸಿದ ಮಹಿಳೆಯರ ಪ್ರತಿಭಟನೆ

ಪೆಷಾವರ್— 60 ಮಂದಿ ಬುರುಕೆ ಧರಿಸಿದ ಮಹಿಳೆಯರು ಪ್ರಜಾರಾಜ್ಯದ ಪುನರುತ್ಥಾನ ಮತ್ತು ತಮ್ಮ ನಾಯಕರ ಬಿಡುಗಡೆಗಾಗಿ ಭಿತ್ತಿಪತ್ರ ಹಿಡಿದು ರಸ್ತೆಗಳಲ್ಲಿ ಶನಿವಾರ ಮೆರವಣಿಗೆ ನಡೆಸಿದರು.

★

ದೇವಾಲಯವನ್ನು ಹಾಳುಮಾಡಿರುವರು

ಕಲ್ಲಿಕೋಟೆ— ಯಾರೋ ದುಷ್ಕರು ಶನಿವಾರ ರಾತ್ರಿ ಕುಡುಂಗಾಪುರಿನ ಶಿವ ದೇವಾಲಯದ ಚಾವಣಿ ಕಿತ್ತು ಹಾಕಿ, ಬಾಗಿಲುಗಳನ್ನು ಒಡೆದು, ಗರ್ಭಗುಡಿಯಲ್ಲಿನ ಲಿಂಗವನ್ನು ಕಿತ್ತು ಎಸೆದಿರುವರು – ಅಲ್ಲಿ ಶನಿವಾರ ರಾತ್ರಿವರೆಗೂ ಭಜನೆ ಪೂಜೆ ನಡೆದಿತ್ತು – ಈ ದೇವಾಲಯವು, ದೇವಾಲಯ ರಕ್ಷಣಾ ಸಮಿತಿ ಚಳವಳ ಸ್ಥಾನವಾದ ಅಂಗಡಿಪುರದ ತಲಿ ದೇವಾಲಯಕ್ಕೆ 5 ಮೈಲಿ ದೂರದಲ್ಲಿದೆ.

ಜಡ್ಜರಿಗೆ ಬಿಳೀ ಕೈ ಚೀಲ

ಮೈಸೂರು— ಜಿಲ್ಲಾ ಮತ್ತು ಸೆಷನ್ಸ್ ಜಡ್ಜರು ಶ್ರೀ ಕುದೂರವರಿಗೆ, ತಮ್ಮ ಕಳೆದ ತಿಂಗಳು ಖಾಲಿ ತಕ್ಷೀರು ಪಟ್ಟಿ ಇತ್ತದ್ದಕ್ಕಾಗಿ ಬಿಳೀ ಕೈ ಚೀಲ ಕೊಟ್ಟು ಗೌರವ ಸಲಾಯಿತು – 88 ವರ್ಷಗಳ ಮೈಸೂರು ಸಿಟಿ ಲಾ ಕೋರ್ಟುಗಳಲ್ಲಿ ಈ ಗೌರವ ಪಡೆಯಲು ಇವರೇ ಪ್ರಥಮ ನ್ಯಾಯಾಧೀಶರೆಂದು ಹೇಳಲಾಯಿತು – ಕಿಕ್ಕಿರಿದ ಕೋರ್ಟು ಸಭಾಂಗಣದಲ್ಲಿ ಈ ಆನಂದದ ದೃಶ್ಯ ನಡೆಯಿತು.

●

ಅಯೂಬರ ವಿರುದ್ಧ ಚಳವಳ

ರಾವಲ್ಪಿಂಡಿ— ಅಧ್ಯಕ್ಷ ಅಯೂಬರ ವಿರುದ್ಧ ಚಳವಳದಲ್ಲಿ ಪಶ್ಚಿಮ ಪ್ರಾಕಿಸ್ತಾನದಲ್ಲಿ ವಿದ್ಯಾರ್ಥಿಗಳೂ, ರಾಜಕೀಯ ಮುಖಂಡರೂ ಸೇರಿ 11 ಮಂದಿ ದಸ್ತಗಿರಿ ಮಾಡಲ್ಪಟ್ಟಿರುವರು.

ಪೋಲೀಸರ ನಕ್ಸಲೈಟರ ಹರ್ಷಣೆ

ಹೈದರಾಬಾದು— ಶ್ರೀಕಾಕುಲಂ ಜಿಲ್ಲೆಯಲ್ಲಿನ ಒಂದು ಗ್ರಾಮದಲ್ಲಿ ಶನಿವಾರ ರಾತ್ರಿ, ತಮ್ಮನ್ನು ಬಂದೂಕಗಳಿಂದ ಎದುರಿಸಿದ ನಕ್ಸಲೈಟು ಗಿರಿಜನರ ಮೇಲೆ ಪೋಲೀಸರು ಗುಂಡು ಆರು ಸುತ್ತು ಹಾರಿಸಿದ್ದರು – ಈ ದೊಂಬಿ ಜನರು ಒಂದು ಸ್ಕೂಲು ಕಟ್ಟಡವೂ ಸೇರಿ ಅನ್ಯೇಕ ಮನೆಗಳಿಗೆ ಬೆಂಕಿ ಹತ್ತಿಸಿದರು.

★

ಆನೆ ಮೇಲೆ ಮೆರವಣಿಗೆ

ಬೆಂಗಳೂರು— ಪ್ರಸಿದ್ಧ ವಿದ್ವಾಂಸರಾದ ಡಾ॥ ಕೆ ವಿ ಪುಟ್ಟಪ್ಪ ಮತ್ತು ಡಾ॥ ಉಮಾಶಂಕರ ಜೋಷಿಯವರನ್ನು ಅಲಂಕೃತ ಆನೆಯ ಮೇಲೆ ಕೂರಿಸಿ, ಕಾರ್ಪೋರೇಷನ್ ಕಚೇರಿಯಿಂದ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಬುಧವಾರ ಮೆರವಣಿಗೆಯಲ್ಲಿ ಕರೆತರಲಾಗುವುದು.

★

ಕಚ್ ಸತ್ಯಾಗ್ರಹ

ಬೆಂಗಳೂರು— ಹಂಗಾಮಿ ನಿಲ್ಲಿಸಿರುವ ಕಚ್ ಸತ್ಯಾಗ್ರಹವನ್ನು ಏಪ್ರಿಲ್–ಮೆ ನಲ್ಲಿ ಪುನಃ ಪ್ರಾರಂಭಿಸಲಾಗುವುದೆಂದು ಬೀಹಾರಿನ ಎಸ್ಸೆಸ್ಪಿ ನಾಯಕಿ ಶ್ರೀಮತಿ ರಮಣಿಕಾ ಗುಪ್ತ ಹೇಳಿದರು.

★

ರೈಲು ಓಡಾಟಕ್ಕೆ ಆತಂಕ

ನವದಾಸು— ಇಂಗ್ಲೀಷು ವರ್ತೆಗಳ ಬದಲಿಗೆ ಏ ಐ ಆರ್ ನಲ್ಲಿನ ಕಾಲದ ಬದಲಾವಣೆಯನ್ನು ಪ್ರತಿಭಟಿಸುತ್ತಿರುವ ವಿದ್ಯಾರ್ಥಿಗಳು, ನಿನ್ನೆ ಬೆಳಿಗ್ಗೆ ಅಂಬಟ್ಟೂರಿನ ಹತ್ತಿರ ರೈಲು ರಸ್ತೆಯಲ್ಲಿ ನಿಂತು 5 ರೈಲುಗಳನ್ನು ತಡೆದರು – ಅರ್ಧ ಗಂಟೆ ನಂತರ ಅವು ಮುಂದೆ ಹೊರಟವು.

★

ಮೈಸೂರು ಉಪಕರಣಗಳ ಕಾರ್ಖಾನೆ

ಹಾಸನ

(ಮೈಸೂರು ಸರಕಾರದ ಉದ್ದಿಮೆ)

ಜೆನ್ನಾಗಿ ಕಾವು ಕೊಟ್ಟು ಟೆಂಪರುಗೊಳಿಸಿದ
ಶ್ರೇಷ್ಠ ಕಾರ್ಬನ್ ಉಕ್ಕಿನಿಂದ ತಯಾರಿಸಿದ
ಶ್ರೇಷ್ಠ ದರ್ಜೆಯ ಉಪಕರಣಗಳು.

ಸಾಮಾನುಗಳನ್ನು ತೆಗೆದುಕೊಳ್ಳುವ ಮೊದಲೇ ಒರಗೆ ಹಚ್ಚಬಹುದು

ಈ ಉಪಕರಣಗಳು ಅತ್ಯಂತ ಗಟ್ಟಿಯಾಗಿವೆ
ದೀರ್ಘಕಾಲ ಬಾಳಿಕೆ ಬರುತ್ತವೆ
ಇದರಲ್ಲಿ ಹಣ ತೊಡಗಿಸುವುದು ಒಂದು ಸುಸ್ಥೈರ್ಯ

ಕಾರಖಾನೆ ಅಥವಾ ಜೋನಲ್ ಏಜೆಂಟರೊಡನೆ ಪತ್ರವ್ಯವಹಾರ ಮಾಡಬಹುದು

ಭತ್ತದ ಮೂಟೆಗಳ ಕಳವು

ಕುಸ್ಟು— ಬಾಡ್‌ನಲ್ಲಿಯ ಒಂದು ಗೋಡೌನಿನಲ್ಲಿ ಆದ ಅಕ್ಕಿ ಮೂಟೆಗಳ ಕಳುವಿನ ಸಂಬಂಧದಲ್ಲಿ ದಸ್ತಗಿರಿ ಮಾಡಲ್ಪಟ್ಟಿದ್ದ ಗ್ರಾಮಪಂಚಾಯಿತಿ ಕಾರ್ಯದರ್ಶಿ ಮತ್ತಿತರರು ಜಾಮೀನಿನ ಮೇಲೆ ಬಿಡಲ್ಪಟ್ಟರು.

●

ಮೈದಾ ಮುಂತಾದ್ದು ಪೊಟ್ಟಣಗಳಲ್ಲಿ

ಫುಡ್ ಕಾರ್ಪೊರೇಷನ್ನಿನವರು ಒಂದೊಂದು ಕಿಲೋ ಪ್ಯಾಕಟ್ಟಿನಲ್ಲಿ ಮೈದಾ, ಗೋಧಿ, ರವೆ, ಕಡ್ಲೆ ಮಾರಲಿರುವರು — ಸಂಕ್ರಾಂತಿ ಹಬ್ಬದಿಂದ ಈ ಏರ್ಪಾಡು — ಸೂಪರ್, ಜನತಾ ಬಜಾರುಗಳು, ಸಹಕಾರ ಸಂಸ್ಥೆ, ಡಿಪಾರ್ಟ್‌ಮೆಂಟಲ್ ಸ್ಟೋರುಗಳಲ್ಲಿ ದೊರೆಯುವವು.

●

ಏ ಐ ಆರ್ ನೀತಿ ಪ್ರತಿಭಟನೆ

ಮದರಾಸು— ಏ ಐ ಆರ್ ನೀತಿ ಪ್ರತಿಭಟಿಸಿ, ವಿದ್ಯಾರ್ಥಿಗಳು ವಾಣಿಯಂಬಾಡಿ ಹತ್ತಿರ ಎರಡು ಸಾರಿ ರೈಲನ್ನು ಅಡ್ಡಕಟ್ಟಿಸಲ್ಲಿಸಿದರು.

ಕೇಂದ್ರದ ಸಾಲ ತೀರಿಸಲು

ಮದರಾಸು— ರಾಜ್ಯಗಳು ಕೇಂದ್ರದ ಸಾಲ ತೀರಿಸುವದಕ್ಕೆ ಅವಧಿಯನ್ನು ಪುನರ್ ನಿಷ್ಕರ್ಷಿಸುವಂತೆ ಐದನೇ ಫೈನಾನ್ಸ್ ಕಮಿಸ್ಸ್ ಶಿಫಾರಸು ಮಾಡುವ ಸಂಭವವಿದೆಯೆಂದು ಹೇಳಲಾಗಿದೆ.

○

ಭೂಮಿ ವಿಲೆ

ಬೆಂಗಳೂರು— ಎರಡು ವರ್ಷಗಳೊಳ ಸರ್ಕಾರಿ ಪಾಳು ಭೂಮಿಯನ್ನು ಭೂಮಿ ಇಲ್ಲದವರಿಗೆ ಕೊಡಲಾಗುವುದು ಅಥವಾ ಅರ್ಹರಾದ ವ್ಯವಸಾಯಗಾರರಿಗೆ ಮಾರಲಾಗುವುದು ಎಂದು ಕಂದಾಯ ಮಂತ್ರಿ ಶ್ರೀ ಕೌಜಲಗಿ ಹೇಳಿದರು.

○

5 ಮಿಲಿಯ ಕಾರ್ಮಿಕರ ರುಜು

ನವದೆಹಲಿ— ಟ್ರೇಡ್ ಯೂನಿಯನ್ನಿನ ಮೂಲಭೂತ ಹಕ್ಕಿಗೆ ಸರಕಾರದ ವಿರೋಧವನ್ನು ಪ್ರತಿಭಟಿಸಿ ಕಡೆಯ ಪಕ್ಷ 5 ಮಿಲಿಯ ಕಾರ್ಮಿಕರ ಸಹಿಯುಳ್ಳ ಮನವಿಯನ್ನು ಮೇ 1ರಂದು ಪಾರ್ಲಿಮೆಂಟಿಗೆ ಅರ್ಪಿಸುವ ಯೋಜನೆ ಇದೆ.



Help The Gorakshana

Quality Printing — Neat Binding

Lakshminarasimha Press

Sivarampet, Mysore

SHAKTI SUDHA

A Superb Tonic

ವುಡ್‌ಲ್ಯಾಂಡ್ ಶಿಸ್ ಜಯಪ್ರದ 3 ನೇ ವಾರ

ಅದ್ಭುತ, ಅಸಮಾನ, ಅಸಾಧಾರಣ ಫಿಲಂಗೀಳಿನ ವ್ಯಕ್ತಿಗಳ ವೈಭವಪೂರಿತ ಆಗಮನ

— ಜೆಮಿನಿಯವರ ಹಾಸ್ಯಮಯ ವರ್ಣರಂಜಿತ ಚಿತ್ರ (ಹಿಂದಿ) —

ತ್ರೀನ್ ಬಹುರಾಣಿಯಾ

ತಾರಾಗಣ — ಸಾಹುಕಾರ್ ಜಾನಕಿ, ಕಾಂಚನ, ಜಯಂತಿ, ಶಶಿಕಲಾ, ಆಫಾ, ರಮೇಶ್‌ದೇವ್, ರಾಜೇಂದ್ರನಾಥ್, ಪೃಥ್ವಿರಾಜ್ ಕಪೂರ್

[ದಿನ 3 ಪ್ರದರ್ಶನಗಳು]

ಆಪೆರಾ— ಜನಪ್ರಿಯ 5 ನೇವಾರ

ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

ಪೆಲಾದ್

ಪಾತ್ರ — ಜಿತೇಂದ್ರ, ಬಬಿತಾ, ಸುಜೀತ್ ಕುಮಾರ್, ಮೆಹಮೂದ್

ನಿರ್ದೇಶನ — ಕುಂದನ್ ಕುಮಾರ್ ಸಂಗೀತ—ಚಿತ್ರಗುಪ್ತ

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah, Sri Madhav Shenoi Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Protect the Cow

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4